**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 09-02-2024.</u>**

**<u>ಪಾಟೀ ಸವಾಲುಃ ಎದುರದಾರ ಪರ ಶ್ರೀ.ಕೆ ಜಿ ಕೆ ವಕೀಲರಿಂದಃ</u>**

1. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ದೂರನ್ನು ನನ್ನ ಸಹೋದರ ಕೊಟ್ಟಿದ್ದರು. ಅಪಘಾತವು 27.01.2022 ರಲ್ಲಿ ಆಗಿತ್ತು. ಅಪಘಾತವಾದ ದಿನ ದೂರು ದಾಖಲಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಆ ದಿನ ಆಸ್ಪತ್ರೆಯಲ್ಲಿ ದಾಖಲು ಇದ್ದೆ ಎಂದು ಹೇಳುತ್ತಾರೆ. ಅಪಘಾತವಾದ ಸ್ಥಳ ಹತ್ತರಗುಂಜಿ ಕ್ರಾಸ್ ಗೋವಾ ಬೆಳಗಾವಿ ಹೆದ್ದಾರಿಯಲ್ಲಿ ಇದೆ. ಅಪಘಾತವಾದ ಸ್ಥಳದಿಂದ ಬಹಳ ವಾಹನಗಳು ಚಲಿಸುತ್ತವೆ ಎಂದರೆ ನಿಜ. ಅಪಘಾತವಾದ ದಿನ ನಾವು ಬೆಳಗಾವಿಯಿಂದ ಕೆಲಸ ಮುಗಿಸಿಕೊಂಡು ಖಾನಾಪೂರಕ್ಕೆ ಬರುತ್ತಿದ್ದೆವು. ಹೆದ್ದಾರಿ ಆಗಿದ್ದರಿಂದ ನಾವು ಆ ದಿನ ಅತೀ ಜೋರಾಗಿ ವಾಹನ ಚಾಲನೆ ಮಾಡಿಕೊಂಡು ಬರುತ್ತಿದ್ದೆವು ಅಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನದ ಸಂಖ್ಯೆ ಗೊತ್ತಿಲ್ಲ ಆದರೆ ಸದರಿ ವಾಹನ ದ್ವಿಚಕ್ರ ಸ್ಪೆಲೆಂಡರ ವಾಹನ ವಾಗಿತ್ತು. ಎದುರಿನಿಂದ ಬರುತ್ತಿದ್ದ ದ್ವಿಚಕರ ಸ್ಪೆಲೆಂಡರ ವಾಹನ ಚಾಲಕ ತನ್ನ ವಾಹನವನ್ನು ಬಿಟ್ಟು ಜಿಗಿದನು ಆಗ ದ್ವಿಚಕ್ರ ವಾಹನ ನನ್ನ ವಾಹನಕ್ಕೆ ಬಂದು ಡಿಕ್ಕಿ ಹೊಡೆಯಿತು. ನನ್ನ ತಪ್ಪಿ ನಿಂದ ಆ ದಿನ ಅಪಘಾತವಾಗಿದ್ದು ಸ್ಪೆಲೆಂಡರ ವಾಹನ ಚಾಲಕನ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ.

2. ಅಪಘಾತದ ನಂತರ ನನಗೆ ಹಿಂದಿನಿಂದ ಬರುತ್ತಿದ್ದ ಒಂದು ಕಾರಿನವರು ಆಸ್ಪತ್ರೆಗೆ ದಾಖಲು ಮಾಡಿದ್ದರು. ಸದರಿರವರ ಹೆಸರು ಗೊತ್ತಿಲ್ಲ. ನಾನು ಪೇಂಟಿಂಗ ಕೆಲಸ ಮಾಡುತ್ತಿದ್ದೆ. ನಾನು ಪೇಂಟಿಂಗ್ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ನನ್ನ ಶಾಲೆಯ ದಾಖಲೆ ಹಾಜರು ಮಾಡಿಲ್ಲ. ನನ್ನ ವಯಸ್ಸು ಅಪಘಾತದ ಸಮಯದಲ್ಲಿ 31 ವರ್ಷ ಇತ್ತು. ನನಗೆ ಅಪಘಾತದ ಸಮಯದಲ್ಲಿ 31 ವರ್ಷ ವಯಸ್ಸು ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿಜವಾದ ವಯಸ್ಸು ಗೊತ್ತಾಗುತ್ತದೆ ಎಂದು ನಾನು ಶಾಲಾ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಶಾಲೆಯ ದಾಖಲೆ ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ನಿಜ.

3. ನಾನು ಮೊದಲು ಖಾನಾಪೂರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ ನಂತರ ಬೆಳಗಾವಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತದನಂತರ ಕೆ ಎಲ್ ಇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಾನು 13 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. 13 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದ ಕುರಿತು ಆಸ್ಪತ್ರೆಯ ಬಿಡುಗಡೆ ಪತ್ರ ಹಾಜರು ಮಾಡಿದ್ದೇನೆ ಅಥವಾ ಇಲ್ಲ ನನಗೆ ನೆನಪಿಲ್ಲ. 13 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ

ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲು ಪೆಂಟಿಂಗ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿಯು ನನ್ನ ಕೈಗೆ ಪೆಟ್ಟಾಗಿದ್ದು ಪೆಂಟೆಂಗ ಕೆಲಸ ಮಾಡಲು ಆಗುತ್ತಿಲ್ಲ ಎಂದು ಹೇಳುತ್ತಾರೆ. ನಾನು ಪೆಂಟಿಂಗ ಕೆಲಸ ಮಾಡುತ್ತಿಲ್ಲ ಎಂದು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಔಷಧಿ ಚೀಟಿಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಜೊತೆ ಶಾಮಿಲುಮಾಡಿಕೊಂಡು ಸುಳ್ಳು ವರದಿಗಳನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯರೊಂದಿಗೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಹಾಗೂ ಎದುರಿನಿಂದ ಬರುತ್ತಿದ್ದ ದ್ವಿಚಕ್ರ ವಾಹನ ಚಾಲಕನ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**